ಕೆರೆಗೆ ಬಿದ್ದಿರೊ ಹೆಂಗಸು ಖಂಡಿತ ಸುಮಂಗಳಕ್ಕ ಅಲ್ಲ ಅನ್ನುವ ತೀರ್ಮಾನಕ್ಕೆ ಬಂದರು.

ದಾಸಣ್ಣನಿಗೆ ಚೇರ್ಮನ್ನರ ಮೇಲೇ ಗುಮಾನಿ. ಅಥವಾ ಅಕ್ಕ ಪಕ್ಕದ ಊರಿನ ಯಾವನೊ ಗುಟ್ಟಾಗಿ ಇಟ್ಟುಕೊಂಡ ಹೆಂಗಸನ್ನು, ಅವಳ ಮಗುವನ್ನು ಖೂನಿ ಮಾಡಿಸಿ ಕೆರೆಗೆ ತಂದು ಹಾಕಿರಬಹುದೇ ಅಂತಲೂ ಅನುಮಾನ. ಆದರೆ, ಅದನ್ನು ಬಾಯಿ ಬಿಟ್ಟು ಹೇಳಿಲಿಲ್ಲ.

'ವತ್ತಾರೆ ಮಾಯಾಬ್ರಹ್ಮಾಚಾರ್ ಮನೆಗೋಗಿ ಸುಮಂಗಳಕ್ಕ ಮನೆಯಲ್ಲಿ ಇದ್ದಾಳೋ ಇಲ್ಲವೋ ಅಂಬದನ್ನ ಮನೆಯವರಿಗೆ ಗೊತ್ತಾಗದಂಗೆ ಯಾರಾದರೂ ನೋಡಿಕಂಡ್ ಬರ್ರಿ' ಅಂತ ದಾಸಣ್ಣ ಹೇಳಿದ. 'ಕೆರೆಗೆ ಬಿದ್ದಿರೊ ಹೆಂಗಸು, ಮಗು ನಮ್ಮೂರಿನವರಂತೂ ಅಲ್ಲ. ಗುಡ್ಡದಳ್ಳಿಯವರಿರಬೌದು ಅಥವಾ ಎಲ್ಲೋ ಖೂನಿ ಮಾಡಿ ನಮ್ಮ ಕೆರೆಗೆ ತಂದು ಹಾಕಿರಬೌದು ಅನ್ನೋ ಅನುಮಾನ ನನಗಿದೆ' ಅಂತ ದಾಸಣ್ಣ ತನ್ನ ಸುತ್ತ ಇದ್ದವರಿಗೆಲ್ಲ ಹೇಳಿಯೇ ಬಿಟ್ಟ. ಹೆಂಗಿದ್ರೂ ನಾಳೆ ಹೆಣ ಹೊರಕ್ಕೆ ತೆಗೆದ ಮೇಲೆ ಗೊತ್ತಾಗುತ್ತಲ್ಲ... ಪೊಲೀಸರು ಬರೋವರೆಗೂ ಕಾಯಣ ಅನ್ನೋ ತೀರ್ಮಾನಕ್ಕೆ ಬಂದು ಎಲ್ಲರೂ ತಂತಮ್ಮ ಮನೆಗಳಿಗೆ ಹೋಗಿ ಮಲಗಿದರು.

ಪೊಲೀಸರು ಊರಿಗೆ ಬರ್ತಿದ್ದಂಗೆ ಅವರನ್ನ ನಮ್ಮನೆ ಹತ್ರಕ್ಕೆ ಕರಕಂಡ್ ಬರಬೇಕು. ಹೆಣಗಳಿಗೆ ಕೊರೊನಾ ಪರೀಕ್ಷೆ ಮಾಡಿಸದೆ ಮಹಜರು ಮಾಡಕೆ ಬಿಡಬಾರದು. ಗೌರ್ಮೆಂಟ್ ಆಸ್ಪತ್ರೆ ಡಾಕ್ಟ್ರಿಗೆ ಕೊರೊನಾ ಅಂತ ಅವರು ದುರ್ಗದ ಆಸ್ಪತ್ರೆಗೆ ಸೇರಿಕೊಂಡಿದ್ದಾರೆ. ಹೆಣಗಳಿಗೆ ಕೊರೊನಾ ಟೆಸ್ಟ್ ಮಾಡಿಸಲು ಯಾವ ಊರಿಂದ ಡಾಕ್ಟರನ್ನು ಕರೆಸುತ್ತಾರೆ ಅಂಬದನ್ನ ಮೊದಲು ತಿಳಕಬೇಕು. ಹೆಣ ಎತ್ತಲು ಬರೊ ಪೊಲೀಸರಿಗೆ, ಟೆಸ್ಟ್ ಮಾಡಲು ಬರೊ ಡಾಕ್ಟರಿಗೆ ಲಂಚ ಕೊಟ್ಟು ತಮಗೆ ಬೇಕಾದಂತೆ ರಿಪೋರ್ಟ್ ಬರೆಸಲು ಚೇರ್ಮನ್ನರು ಪ್ರಯತ್ನ ಮಾಡಬೌದು. ಅದಕ್ಕೆ ಅವಕಾಶ ಕೊಡಬಾರದು. ಹೀಗೆ ಹತ್ತಾರು ಸಾಧ್ಯತೆಗಳನ್ನು ದಾಸಣ್ಣ ತನ್ನ ಪರಿವಾರದ ಜತೆ ಚರ್ಚಿಸಿದ್ದ. ಪೊಲೀಸರು ಬರೋದರೊಳಗೇ ಹೆಣಗಳನ್ನು ಕೆರೆಯಿಂದ ಎತ್ತಿ ಹೊರಕ್ಕೆ ಹಾಕಿಸಲೂಬಹುದು ಅಂತ ಕೆಲವರು ಊಹಿಸಿದರು.

★★★

ದಾಸಣ್ಣನ ಬೆಂಬಲಿಗರು ಬೆಳ್ಳಂಬೆಳಿಗ್ಗೆ ಊರಮುಂದಿನ ಅರಳಿಕಟ್ಟೆ ಮೇಲೆ ಕೂತು ಪೊಲೀಸರಿಗಾಗಿ ಕಾಯತೊಡಗಿದರು. ಕೊರೊನಾ ಬಂದ ಮೇಲೆ ಬಸ್ಸುಗಳ ಓಡಾಟ ನಿಂತಿದೆ. ಪೊಲೀಸರು ಜೀಪಿನಲ್ಲಿ ಅಥವಾ ಬೈಕುಗಳಲ್ಲಿ ಬರುತ್ತಾರೆ ಎಂದು ಊಹಿಸಿದ್ದ ಚೇರ್ಮನ್ನರು ಗೊಲ್ಲಳ್ಳಿ ಕ್ರಾಸ್ ಹತ್ತಿರ ತಮ್ಮ ಭಂಟರನ್ನು ನಿಲ್ಲಿಸಿದರು.

ಗಂಟೆ ಒಂಬತ್ತಾದರೂ ಪೊಲೀಸರ ಸುಳಿವಿಲ್ಲ. ಅವರ ದಾರಿ ಕಾಯುತ್ತ ಕೂತವರಿಗೆ ಬೇಸರವಾಯಿತು. ಚಿಕ್ಕುಂಬೋವತ್ತಿನ ನೆಪದಲ್ಲಿ ಮನೆಗಳಿಗೆ ಹೋಗುವುದೋ ಬೇಡವೋ ಎಂಬ ಗೊಂದಲದಲ್ಲೇ ಕಳೆದರು. ಇಬ್ಬರು ಪೊಲೀಸರು ಮೋಟರ್ ಸೈಕಲೊಂದರಲ್ಲಿ ಊರಿಗೆ ಬಂದಾಗ ಹತ್ತೂವರೆ ಆಗಿತ್ತು. ಅರಳಿಕಟ್ಟೆ ಹತ್ತಿರ ಸೇರಿದ್ದ ಜನರ ಗುಂಪು ನೋಡಿ ಅವರು ಅಲ್ಲೇ ಇಳಿದರು. ಕಾಯುತ್ತಿದ್ದ ಜನ ಅವರ ಸುತ್ತ ಬಂದು ನಿಂತರೇ ವಿನಾ ಕೆರೆಯಲ್ಲಿ ಹೆಣಗಳು ತೇಲುತ್ತಿರುವ ಮಾಹಿತಿ ಹೇಳುವ ಧೈರ್ಯ ಮಾಡಲಿಲ್ಲ. ಕೆಲವು ಕ್ಷಣ ಅಲ್ಲಿ ಮೌನ ನೆಲೆಸಿತ್ತು. ಬಂದವರಿಬ್ಬರೂ ಇನ್ನೊಂದೆರಡು ವರ್ಷಗಳಲ್ಲಿ ನಿವೃತ್ತರಾಗಲಿದ್ದ ಹೆಡ್ ಕಾನ್‌ಸ್ಟೆಬಲ್(ಎಚ್ಸಿ)ಗಳು. ಇಬ್ಬರೂ ಅನುಭವಿಗಳು. ಸರ್ವೀಸ್ ಉದ್ದಕ್ಕೂ ಇಂಥ ಹತ್ತಾರು ಪ್ರಕರಣಗಳನ್ನು ಖುದ್ದು ಕಂಡವರು. ಸತ್ತವನದು ಸಹಜ ಸಾವೊ, ಆತ್ಮಹತ್ಯೆಯೊ, ಕೊಲೆಯೊ ಅನ್ನೋದನ್ನು ಸಂದರ್ಭಕ್ಕೆ ತಕ್ಕಂತೆ ನಿರ್ಧರಿಸುವ ವಿಷಯದಲ್ಲಿ ಪಳಗಿದವರು. ಕೆರೆಗೆ ಹೆಣಗಳು ಬಿದ್ದು ಇಪ್ಪತ್ತನಾಲ್ಕು ಗಂಟೆಗಳಾಗಿವೆ. ಕೊಳೆತಿರೊ ಹೆಣಗಳನ್ನು ಎತ್ತಿ ಹೊರಕ್ಕೆ ಹಾಕಬೇಕೆಂಬ ಆತುರ ಅವರಿಗೆ ಇದ್ದಂತೆ ಕಾಣಲಿಲ್ಲ.